**ಸಾಕ್ಷಿಗೆ ದಿನಾಂಕಃ11-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. TLP ವಕೀಲರಿಂದ ::**

2 ನೇ ಪ್ರತಿವಾದಿಯು ಬರೆದುಕೊಟ್ಟ ಎಸ್ ಪಿ ಎ ಆಧಾರದಲ್ಲಿ ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ. 1 ನೇ ಪ್ರತಿವಾದಿ ನನಗೆ ಯಾವುದೇ ಎಸ್ ಪಿ ಎ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ 1 ನೇ ಪ್ರತಿವಾದಿಯ ಪರವಾಗಿಯೂ ಸಹ ಸಾಕ್ಷ್ಯ ನುಡಿಯುತ್ತಿದ್ದೇನೆ. ದಾವ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.

ಈ ದಾವೆಯನ್ನು ಕೆರೆಹೊಸಹಳ್ಳಿ ಗ್ರಾಮದ ಸರ್ವೇ ನಂಬರ್ 60/3 ರಲ್ಲಿನ 10 ಗುಂಟೆಗೆ ಸಂಬಂಧಪಟ್ಟಂತೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ಜಾಗವು ಅಡಿಕೆ ತೋಟ ಆಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಶಾಂತಮ್ಮ ರವರ ಅಡಿಕೆ ತೋಟ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ಸರ್ವೇ ನಂಬರ್ 65 ರಲ್ಲಿನ ರಸ್ತೆ ಎಂದರೆ ಸಾಕ್ಷಿಯು ಸದರಿ ರಸ್ತೆಯು ದಾವಾ ಸರ್ವೇ ನಂಬರ್ ಜಾಗದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ1 ರಲ್ಲಿ ಕಂಡು ಬರುವ ರಸ್ತೆಯು ಸರ್ವೇ ನಂಬರ್ 65 ರಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 60/3 ರ ಪೂರ್ವಕ್ಕೆ ಸರ್ವೇ ನಂಬರ್ 65 ರ ಜಾಗ ಇರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ವಾದಿಗಳ ಹಾಗೂ 2 ನೇ ಪ್ರತಿವಾದಿಗೆ ಸೇರಿದ ಅಡಿಕೆ ತೋಟ, ದಕ್ಷಿಣಕ್ಕೆ 2 ನೇ ಪ್ರತಿವಾದಿಯ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳು ಅಥವಾ ಅವರ ಕುಟುಂಬಸ್ಥರು ಕ್ರಯಕ್ಕೆ ಪಡೆದಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಅದರ ಕಂದಾಯ ದಾಖಲಾತಿಗಳು ಸಹ ಪ್ರತಿವಾದಿಗಳ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ನನ್ನ ಅಜ್ಜ ತಿಮ್ಮಣ್ಣ ಎನ್ನುವವರು ಸರ್ವೇ ನಂಬರ್ 60/3 ರಲ್ಲಿ 10 ಗುಂಟೆ ಜಾಗವನ್ನು ಸಾರ್ವಜನಿಕರ ಉಪಯೋಗಕ್ಕೆ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವ ಮಾರಾಟವನ್ನು ಬಸಪ್ಪ ಬಿನ್ ನಿಂಗಪ್ಪ, ಕೆಂಚಪ್ಪ ಬಿನ್ ಪೂಜಾರಿ ಕರಿಯಪ್ಪ ಎನ್ನುವವರಿಗೆ 100 ರೂಪಾಯಿ ಮೌಲ್ಯಕ್ಕೆ 1961 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 100 ರೂಪಾಯಿ ಹಣವನ್ನು ನನ್ನ ಅಜ್ಜ ತಿಮ್ಮಣ್ಣ ರವರು ಪಡೆದಿರುತ್ತಾರೆ ಎಂದರೆ ಸರಿ. ಸದರಿ ಮಾರಾಟವು ನಿಪಿ1

ರಂತೆ ನೋಂದಾಯಿತ ಕ್ರಯಪತ್ರದ ಅಡಿ ಆಗಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರವು ಆರ್ ಆರ್ 5 ಮತ್ತು6 ಗಳು ಖರೀದಿದಾರರ ಹೆಸರಿಗೆ ನಿಪಿ2 ಮತ್ತು 3 ರಂತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ಜಾಗದ ಪೈಕಿ ಬಸಪ್ಪ ಬಿನ್ ನಿಂಗಪ್ಪ ರವರಿಗೆ 6 ವರೆ ಗುಂಟೆ ಕೆಂಚಪ್ಪ ಬಿನ್ ಪೂಜಾರಿ ಕರಿಯಪ್ಪರವರಿಗೆ 10 ಗುಂಟೆಯಂತೆ ವಿಭಾಗ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬಸಪ್ಪ ಬಿನ್ ನಿಂಗಪ್ಪ ರವರು ಮೃತರಾದ ನಂತರ ಸದರಿ ಸ್ವತ್ತಿನ ಪೈಕಿ ಬಸಪ್ಪನ ಮಗ ಮಲ್ಲೇಶಪ್ಪನರವರಿಗೆ 6 ವರೆ ಗುಂಟೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ಕೆಂಚಪ್ಪ ಬಿನ್ ಪೂಜಾರಿ ಕರಿಯಪ್ಪ ರವರ ಹೆಸರಿಗೆ 10 ಗುಂಟೆ ಜಮೀನು ಬದಲಾವಣೆ ಆಗಿದ್ದು ಪಹಣಿ ಸಹ ಅದೇ ರೀತಿ ಇರುತ್ತದೆ ಎಂದರೆ ಸರಿ. ಅದೇ ರೀತಿ ಸದರಿ ಸರ್ವೇ ನಂಬರ್ ನಲ್ಲಿಯೇ ಪ್ರತಿವಾದಿ ಇಬ್ಬರಿಗೂ ತಲಾ 24 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಹಾಗೂ ದಾವಾ ಶೆಡ್ಯೂಲ್ ಸ್ವತ್ತು ಬೇರೆ ಆಗಿರುತ್ತದೆ ಎಂದರೆ ಸರಿ. ಕೆಂಚಪ್ಪನ ಹೆಸರಿಗೆ ಬಂದ ಆಸ್ತಿ ಮೇಲೆ ಪ್ರತಿವಾದಿ ಇಬ್ಬರಿಗೂ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಅದೇ ರೀತಿ ಕೆ ವಿ ಮಲ್ಲೇಶಪ್ಪ ರವರ ಹೆಸರಿನಲ್ಲಿ ಇರುವ 6 ವರೆ ಗುಂಟೆ ಹಾಗೂ ಕೆಂಚಣ್ಣ ರವರ ಹೆಸರಿನಲ್ಲಿ ಇರುವ 10 ಗುಂಟೆ ಜಾಗಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವಂತೆ ರಸ್ತೆ ಇರುವ ಬಗ್ಗೆ ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ, ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಆದ ಕ್ರಯಪತ್ರದಲ್ಲಿ ನಮೂದು ಇರುತ್ತದೆ. ನಾನು ಹೇಳುತ್ತಿರುವಂತೆ ಯಾವುದೇ ರಸ್ತೆ ನಮೂದು ಕ್ರಯಪತ್ರದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ ಪೈಕಿ ಪ್ರತಿವಾದಿಗಳ ಹೆಸರಿನಲ್ಲಿ ಇರುವ ಜಾಗ ಮಾತ್ರ ಅಡಿಕೆ ತೋಟ ಆಗಿದ್ದು ಇನ್ನು ಉಳಿದ 16 ವರೆ ಗುಂಟೆ ಜಾಗವು ರಸ್ತೆ ಆಗಿರುತ್ತದೆ. ನಿಪಿ6 ರ ಪ್ರಕಾರ ಪ್ರತಿವಾದಿಗಳ ಜಾಗ ಹೊರತುಪಡಿಸಿ ಇರುವ 16 ವರೆ ಗುಂಟೆ ಜಾಗದಲ್ಲಿ ಸಹ ಅಡಿಕೆ ಹಾಗೂ ತೆಂಟ ಸಸಿಗಳು ಇರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ವಾದಿ ಹಾಗೂ ಪ್ರತಿವಾದಿಗಳು ಅವರ ಜಾಗಕ್ಕೆ ಸಂಬಂಧಪಟ್ಟಂತೆ ವಿಜಯ ಬ್ಯಾಂಕ್ ನಲ್ಲಿ ಕೃಷಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಲು ನನಗೆ ಯಾವುದಾದರು ತೊಂದರೆ ಇರುತ್ತದೆಯೇ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ಜಾಗವು ರಸ್ತೆಗೆಂದು ಕಾಯ್ದಿರಿಸಿದ ಕಾರಣ ಬರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 60/3 ರಲ್ಲಿ ರಸ್ತೆ ಇರುವ ಬಗ್ಗೆ ನಾನು ಯಾವುದೇ ಗ್ರಾಮ ನಕಾಶೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಖರಾಬು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ರಸ್ತೆಯ ಬಗ್ಗೆ ಕ್ರಯಪತ್ರದಲ್ಲಿ ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ1 ರಲ್ಲಿ ಕಂಡು ಬರುವ ಜಾಗದ ಪೂರ್ವಕ್ಕೆ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನಿಡಿ1 ರಲ್ಲಿ ಕಾಣುತ್ತಿರುವ ರಸ್ತೆ ಕಾಮಗಾರಿಯನ್ನು ಪಂಚಾಯಿತಿಯಿಂದ ಮಾಡಲಾಗುತ್ತಿದ್ದು ಅದಕ್ಕೆ ಸಂಬಂಧಪಟ್ಟಂತೆ ಪಂಚಾಯಿತಿಯವರು ಮಾಡಿರುವ sanction estimate ಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ರಸ್ತೆಯನ್ನು ಸರ್ವೇ ನಂಬರ್ 65 ರಲ್ಲಿ ಮಾಡಲಾಗುತ್ತಿದೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಅಡಿಕೆ ತೋಟವನ್ನು ಲಪಟಾಯಿಸುವ ದುರುದ್ದೇಶದಿಂದ ದಾವಾ ಶೆಡ್ಯೂಲ್ ಸ್ವತ್ತನ್ನು ರಸ್ತೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳುತ್ತಿರುವ ರಸ್ತೆ ಯಾವ ಸರ್ವೇ ನಂಬರ್ ಇರುತ್ತದೆ ಮತ್ತು ಅದು ಎಲ್ಲಿಗೆ ಹೋಗುತ್ತದೇ ಎಂದು ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ರಸ್ತೆ ಸರ್ವೇ ನಂಬರ್ 60/3 ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುತ್ತಿರುವ ರಸ್ತೆಯ ಬಗ್ಗೆ ಇವರೆಗೂ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ಹೇಳುತ್ತಿರುವಂತೆ ದಾವಾ ಸರ್ವೇ ನಂಬರ್ ರಸ್ತೆ ಎಂದು ತೋರಿಸಲು ಇವರಗೊ ಯಾವುದೇ ಕ್ರಯಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಶೆಡ್ಯೂಲ್ ಸ್ವತ್ತನ್ನು ನಮಗೆ ಮಾರಾಟ ಮಾಡಲು ಹಲವಾರು ಬಾರಿ ಒತ್ತಾಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತನ್ನು ನಾನು ಹೇಳುತ್ತಿರುವಂತೆ ರಸ್ತೆ ಎಂದು ಗ್ರಾಮಸ್ಥರ ಪರವಾಗಿ ಯಾವತ್ತು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: